ಇಂದ್ರಿಯಾತೀತ ಪ್ರಪಂಚದಲ್ಲಿ ಎಂದು ಹೇಳುತ್ತಾರೆ. ಇಂದ್ರಿಯಗ್ರಾಹ್ಯ ಪ್ರಪಂಚದ ತರ್ಕ ಅಥವಾ ಬೌದ್ಧಿಕ ಕಸರತ್ತುಗಳು ಈ ವಾಸ್ತವ ಜಗತ್ತಿನಲ್ಲಿ ಉಪಯೋಗಕ್ಕೆ ಬಂದರೂ ಈ ಜಗತ್ತಿನ ಎರಡು ದಡಗಳು 'ಅಪ್ರಮಾಣ, ಅಗಮ್ಯ, ಅಗೋಚರವಾದ' ಸತ್ಯಸಾಗರದಿಂದುಂಟಾಗಿವೆ. ಬಸವಣ್ಣನವರ ವಚನ – **ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ** – ಎನ್ನುವ ಸತ್ಯವನ್ನೇ ಸ್ವಾಮೀಜಿಯವರು ಹೀಗೆ ಹೇಳುವುದನ್ನು ಕಾಣಬಹುದು. ಮತ್ತೆ ಸ್ವಾಮೀಜಿ ಹೇಳುತ್ತಾರೆ, ಧರ್ಮ ಎಂಬುದು ಈ ವಾಸ್ತವ ಪ್ರಪಂಚಕ್ಕಿಂತ ಇಂದ್ರಿಯಾತೀತ ಪ್ರಪಂಚಕ್ಕೇ ಹೆಚ್ಚು ಸೇರಿದೆ. ಅವಾಙ್ಮನಸಗೋಚರವಾದ ಈ ಇಂದ್ರಿಯಾತೀತ ಪ್ರಪಂಚ ನಮ್ಮ ತರ್ಕವನ್ನೂ ಇಂದ್ರಿಯಗ್ರಹಿಕೆಯನ್ನೂ ಮೀರಿದ ಅತೀಂದ್ರಿಯ ಎಲ್ಲೆಗೆ ಸೇರಿದೆ. ನಮ್ಮ ಬೌದ್ಧಿಕತೆ ಈ ವಲಯಕ್ಕೆ ಪ್ರವೇಶಿಸಲಾರದು. ಈ ವಿಸ್ತಾರದಲ್ಲಿ ಸಾಧಾರಣ ಗ್ರಹಿಕೆ ಕೆಲಸ ಮಾಡುವುದಿಲ್ಲ. ಸ್ವಾಮೀಜಿ ಹೇಳುತ್ತಾರೆ, ಇಂತಹ ಒಂದು ಧರ್ಮ, ಹೊರಗಿನಿಂದ ಬಂದಿದ್ದಲ್ಲ; ಅದು ನಮ್ಮೊಳಗೆ, ನಮ್ಮ ಕಣಕಣದಲ್ಲೂ ಇದೆ; ಹಾಗಾಗಿ ಧರ್ಮವನ್ನು ಬಿಡುವುದು ಎಂದರೆ ನಮ್ಮನ್ನು ನಾವೇ ತ್ಯಜಿಸಿದಂತೆ ಎಂದು. ಆದ್ದರಿಂದ ನಮ್ಮ ಅರಿವಿಗೆ ಅಸಾಧ್ಯವೆನಿಸುವ ಈ ಇಂದ್ರಿಯಾತೀತ ಪ್ರಪಂಚವನ್ನು ಕುರಿತು ಚಿಂತಿಸದೆ, ಹುಡುಕದೆ ನಾವು ಇರಲಾರೆವು. ಮತ್ತೆ ಸ್ವಾಮೀಜಿ ಹೇಳುತ್ತಾರೆ, ನಮ್ಮ ಪ್ರತಿಯೊಂದು ಹುಡುಕಾಟವೆನ್ನುವುದು ಇಂದ್ರಿಯಗ್ರಾಹ್ಯ ಪ್ರಪಂಚದಲ್ಲಿ ಪ್ರಾರಂಭವಾದರೂ ಈ ಹುಡುಕಾಟ ಮುಂದುವರೆದಂತೆ ಸೂಕ್ಷ್ಮಾತಿಸೂಕ್ಷ್ಮವಾಗುತ್ತ, ಕೊನೆಗೆ ಈ ಸ್ಥೂಲವಾದ ವಸ್ತುಪ್ರಪಂಚದಿಂದ ಅತೀತವನ್ನು ಪ್ರವೇಶಿಸುತ್ತದೆ ಎಂದು. ಉದಾಹರಣೆಗೆ ಜೀವಶಾಸ್ತ್ರ, ಭೌತಶಾಸ್ತ್ರ, ಖಗೋಳಶಾಸ್ತ್ರ ಅಥವಾ ರಸಾಯನಶಾಸ್ತ್ರ – ಯಾವುದನ್ನು ಬೇಕಾದರೂ ತೆಗೆದುಕೊಳ್ಳಿ. ಇವು ಅತಿಭೌತಿಕವಾಗಿ (metaphysics) ಪರಿಣಮಿಸುವುದನ್ನು ಕಾಣುತ್ತೇವೆ.

ಸ್ವಾಮೀಜಿಯವರು ಸುಮಾರು ೧೨೦ ವರ್ಷಗಳ ಹಿಂದೆಯೇ ಗಮನಿಸಿದ ಈ ವಿದ್ಯಮಾನವು ವಿಜ್ಞಾನ ಮುಂದುವರಿದಂತೆಲ್ಲ ಮತ್ತಷ್ಟು ಗಾಢವಾಗಿ ಈಗ ನಮ್ಮ ಅನುಭವಕ್ಕೆ ಬರುತ್ತಿದೆ. ಇಂದಿನ ಭೌತಶಾಸ್ತ್ರವಂತೂ ಗಣಿತವನ್ನೂ ಜೊತೆಗೆಳೆದುಕೊಂಡು ಅತಿಭೌತಿಕ ವಲಯವನ್ನು ಪ್ರವೇಶಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಈ ವಿಷಯಗಳನ್ನು ವಿವರಿಸುತ್ತ ಸ್ವಾಮೀಜಿ, ಸಾಕ್ರಟೀಸನ ಜೀವನದ ಒಂದು ಘಟನೆಯನ್ನು ಹೇಳುತ್ತಾರೆ. ಇದೊಂದು ಕಟ್ಟುಕತೆಯೇ ಆಗಿರಬಹುದು. ಆದರೂ ಮನೋಜ್ಞವಾಗಿದೆ. ಒಮ್ಮೆ ಸಾಕ್ರಟೀಸನು ಅಥೆನ್ಸ್‌ನಲ್ಲಿ ಭಾಷಣ ಮುಗಿಸಿ ಹಿಂತಿರುಗುತ್ತಿದ್ದನಂತೆ. ಆಗ ಭಾರತದಿಂದ ಹೋಗಿದ್ದ ಬ್ರಾಹ್ಮಣನೊಬ್ಬನು ಅವನಿಗೆ ಎದುರಾದನಂತೆ. ಆಗ ಸಾಕ್ರಟೀಸ್ ಹೇಳಿದ, "ಮನುಷ್ಯನ ಅಧ್ಯಯನಕ್ಕೆ ಯೋಗ್ಯವಾದ ವಿಷಯ ಎಂದರೆ ಮನುಷ್ಯನೇ; ಮನುಷ್ಯನನ್ನು ಅರಿಯುವುದಕ್ಕಿಂತ ದೊಡ್ಡದೇನಿದೆ?" ಆಗ ಆ ಬ್ರಾಹ್ಮಣ ಸಿಡಿಮಿಡಿಗೊಂಡು ಹೇಳಿದನಂತೆ, "ದೇವರನ್ನೇ ಅರಿಯದೆ ಮನುಷ್ಯನನ್ನು ಅರಿಯುವುದಾದರೂ ಹೇಗೆ?" ಮೇಲ್ನೋಟಕ್ಕೆ ಉತ್ಪ್ರೇಕ್ಷೆ ಎನಿಸಬಹುದಾದ, ಆದರೂ ಗಂಭೀರವಾದ ಹೇಳಿಕೆ ಇದು. ಇದನ್ನು ಸುಲಭವಾಗಿ ನಾವು ಅಲ್ಲಗಳೆಯಲಾಗುವುದಿಲ್ಲ. "ನಿನ್ನನ್ನು ನೀನು ಅರಿತುಕೋ" ಎಂಬ ಮಾತನ್ನು ಡೆಲ್ಫಿ ಎಂಬ ಪ್ರದೇಶದಲ್ಲಿರುವ ಅಪೊಲೊ ದೇವಸ್ಥಾನದ ಮುಂಭಾಗದಲ್ಲಿ ಗ್ರೀಕರು ದೊಡ್ಡದಾಗಿ ಬರೆಸಿದ್ದಾರೆ. 'ನಿನ್ನನ್ನೇ ನೀನು ಅರಿತುಕೋ' ಎಂಬ ಮಾತು ಭಾರತೀಯ ಸಂಸ್ಕೃತಿಯಲ್ಲೂ ಅನೇಕ ಬಾರಿ ಪ್ರತಿಧ್ವನಿಸುತ್ತದೆ. ಆದರೆ ಸಾಕ್ರಟೀಸನಿಗೂ ಬ್ರಾಹ್ಮಣನಿಗೂ ನಡೆದ ಈ ಸಣ್ಣ ಸಂಭಾಷಣೆ ಮನುಷ್ಯನ ಅರಿವಿಗೆ ಸಂಬಂಧಪಟ್ಟ ದೊಡ್ಡ ದೊಡ್ಡ ಪ್ರಶ್ನೆಗಳನ್ನು ಎತ್ತುತ್ತದೆ. ಮೊದಲನೆಯದಾಗಿ ಸಾಕ್ರಟೀಸನು ಸಾಮಾನ್ಯವಾಗಿ ಹೇಳುತ್ತಿದ್ದಂತೆ, 'ನನಗೇನೂ ಗೊತ್ತಿಲ್ಲ' ಎಂದು ಹೇಳುತ್ತ ತೃಪ್ತನಾಗಬೇಕೊ? ಅಥವಾ ಆ ಬ್ರಾಹ್ಮಣ ಹೇಳುವಂತೆ, ಈ ಇಡೀ ಅಸ್ತಿತ್ವವನ್ನು ಅರಿಯುವ ಮುಖಾಂತರ ತನ್ನನ್ನೇ ತಾನು ಅರಿಯಬೇಕೊ?

ಸ್ವಾಮೀಜಿಯವರ ಪ್ರಕಾರ ಈ ಇಂದ್ರಿಯಾತೀತ ಅಸ್ತಿತ್ವವನ್ನು ಸಮಗ್ರವಾಗಿ ಅರಿತವರು ಹಿಂದೆ ಇದ್ದರು, ಈಗ ಇದ್ದಾರೆ, ಮುಂದೆಯೂ ಇರುತ್ತಾರೆ. ಇದೊಂದು ಅಸಾಧ್ಯವಾದ ಸಂಗತಿಯೇನಲ್ಲ. ಮನುಷ್ಯ ತನ್ನನ್ನೇ ತಾನು ಅರಿಯಬೇಕಾದರೆ ಎಂದರೆ ವ್ಯಷ್ಟಿಯ ಪರಿಪೂರ್ಣ ಅರಿವು ಅವನಿಗೆ ಬರಬೇಕಾದರೆ, ಅದು ಸಮಷ್ಟಿಯ ಸಮಗ್ರ ಅರಿವಿನ ನೆಲೆಯಲ್ಲಿ ಮಾತ್ರ ಸಾಧ್ಯ. ಇದು ಹೇಗೆಂದರೆ ಒಂದು ಕಿತ್ತಲೆ ತೊಳೆಯನ್ನು ಒಬ್ಬನ ಮುಂದೆ ಇಡುತ್ತೇವೆ ಎಂದುಕೊಳ್ಳೋಣ. ಅವನು ತನ್ನ ಜೀವನದಲ್ಲಿ ಹಿಂದೆಂದೂ ಕಿತ್ತಲೆ ಹಣ್ಣನ್ನು ಅಥವಾ ಆ ಬಗೆಯ ಹಣ್ಣುಗಳನ್ನು ನೋಡಿಯೇ ಇಲ್ಲ ಎಂದು ಭಾವಿಸೋಣ. ಇಂತಹ ವ್ಯಕ್ತಿ ಈ ಕಿತ್ತಲೆ ತೊಳೆಯನ್ನು ಹೇಗೆ ತಾನೇ ಅರ್ಥಮಾಡಿಕೊಳ್ಳಬಲ್ಲ? ಅವನು ಎಷ್ಟೇ ಪ್ರಯತ್ನಪಟ್ಟರೂ ಅವನ ಅರಿವು ಭಾಗಶಃ ಸತ್ಯವೇ ಹೊರತು ಪರಿಪೂರ್ಣ ಸತ್ಯವಾಗುವುದಿಲ್ಲ. ಪರಿಪೂರ್ಣತೆಯ ಅನೇಕ ಭಾಗಗಳನ್ನು ಒಟ್ಟು ಮಾಡಿ ಅರಿತರೂ ಕೂಡ ಅದು ಇಡಿಯನ್ನು ಇಡಿಯಾಗಿ ಗ್ರಹಿಸಿದ ಗ್ರಹಿಕೆಗಿಂತ ಕೆಳಮಟ್ಟದ ಗ್ರಹಿಕೆಯಾಗುತ್ತದೆ. ಒಂದು ವೇಳೆ ಈ ವ್ಯಕ್ತಿಯ ಮುಂದೆ ಒಂದು ಕಿತ್ತಲೆ ಹಣ್ಣನ್ನು ಇಟ್ಟರೆ ಅವನಿಗೆ ತಕ್ಷಣ ಈ ಹಣ್ಣಿನ ಭಾಗವಾದ ಕಿತ್ತಲೆಯ ತೊಳೆ ಪರಿಪೂರ್ಣವಾಗಿ ಅರ್ಥವಾಗುತ್ತದೆ.

ಶ್ರೀರಾಮಕೃಷ್ಣರು ಹೇಳುತ್ತಿದ್ದ ಮಾತೆಂದರೆ "ಮೊದಲು ತೋಟದೊಡೆಯನನ್ನು ಪರಿಚಯ ಮಾಡಿಕೊಂಡುಬಿಡು, ಆಗ ಅವನೇ ತನ್ನ ಆಸ್ತಿಪಾಸ್ತಿಗಳು ಎಷ್ಟಿವೆ ಎಂದು ನಿನಗೆ ತಿಳಿಸಿಕೊಡುತ್ತಾನೆ" ಎಂಬುದು. ಮೊದಲು ದೇವರನ್ನು ಅರಿತುಕೊಂಡರೆ, ಎಂದರೆ ಸಮಷ್ಟಿಯ ಅನುಭವವನ್ನು ದೊರಕಿಸಿಕೊಂಡುಬಿಟ್ಟರೆ, ವ್ಯಷ್ಟಿ ತನ್ನ ಗುಟ್ಟನ್ನು ತಾನೇ ಬಿಟ್ಟುಕೊಡುತ್ತದೆ. ಆಗ ವ್ಯಷ್ಟಿ ಭಾಗವಾಗಿ ಉಳಿಯುವುದಿಲ್ಲ, ಅದು ಪರಿಪೂರ್ಣ ಸತ್ಯದೊಡನೆ ಒಂದಾಗಿ ನಿಲ್ಲುತ್ತದೆ. ಇದೇ ಸ್ವಾಮೀಜಿಯವರ ನಿಲುವು. ✦

## ಶ್ರೀರಾಮಕೃಷ್ಣ ಶಿಷ್ಯೋದ್ಯಾನ : ಪುಷ್ಪ ೧೪

# ಸ್ವಾಮಿ ಅಭೇದಾನಂದರು

ಡಾ. ಕೆ. ಅನಂತರಾಮು



**ಪರಮಹಂಸರ ಪುಷ್ಪೋದ್ಯಾನ:** ಅಭೇದವೆಂದರೆ ಅದು ಅದ್ವೈತ. ನನಗಿಂತ ಬೇರೆಯಾದ ವಸ್ತುವೊಂದಿದೆ ಎಂದು ತಿಳಿಯುವುದೇ ಎಲ್ಲ ಭಯಕ್ಕೂ ಮೂಲ. "ನಾನೇ ಈ ಜಗತ್ತನ್ನೆಲ್ಲ ತುಂಬಿಕೊಂಡಿದ್ದೇನೆ, ನಾನು ಅದ್ವಿತೀಯ" ಎಂದು ಭಾವನೆಮಾಡುವುದೇ ಅಭೇದ, ಅದೇ ನಿರ್ಭಯತೆ. ಅಂತಹ ನಿರ್ಭಯತೆಯ ಅದ್ವೈತಸ್ಥಿತಿಗೇರಿ, ಆತ್ಮಾನಂದಮೂರ್ತಿಯಾಗಿ ಮೆರೆದ ಪುಣ್ಯಪುರುಷರೇ ಸ್ವಾಮಿ ಅಭೇದಾನಂದರು. ಅವರನ್ನು ಪರಮಹಂಸರ ಪುಷ್ಪವಾಟಿಕೆಯ 'ಗೊಬ್ಬಳಿಜಾಜಿ' ಎಂದು ಕರೆಯುವ ಅಪೂರ್ವವಾದ ಕುಸುಮಕ್ಕೆ ಹೋಲಿಸಬಹುದು. ಹಳದಿಬಣ್ಣದ ಆ ಹೂವು ಬೇಗ ಬಾಡುವುದಿಲ್ಲ. ಅದರ ಪರಿಮಳವೂ ಹಾಗೆಯೇ, ಬೇಗ ಮಾಸುವುದಿಲ್ಲ, ದೂರದೂರದವರೆಗೂ ಅದು ತನ್ನ ನರುಗಂಪನ್ನು ಬೀರುತ್ತದೆ. ಪರಮಹಂಸರು ಬೋಧಿಸಿದ ತತ್ತ್ವಗಳನ್ನು ಭರತಖಂಡದಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲೂ ಬಿತ್ತರಿಸಿ ಗೆದ್ದುಬಂದ ಧೀರಪುರುಷಪುಂಗವರೇ ಅಭೇದಾನಂದರು.

**ಯೋಗಮಾರ್ಗವೇ ಜೀವನಮಾರ್ಗ:** ಅಭೇದಾನಂದರು ಕೊಲ್ಕೊತ್ತ ಮಹಾನಗರದ ರಸಿಕಲಾಲಚಂದ್ರ ಮತ್ತು ನಯನತಾರಾದೇವಿ ಎಂಬ ಗೃಹಸ್ಥರ ಮನೆಯಲ್ಲಿ ೨-೧೦-೧೮೬೬ನೆಯ ಮಂಗಳವಾರದಂದು ಅವತರಿಸಿದರು. ನಯನತಾರಾದೇವಿಯು ಕಾಳಿಮಾತೆಯ ಅನನ್ಯಭಕ್ತೆಯಾಗಿದ್ದುದರಿಂದ, ಹುಟ್ಟಿದ ಮಗುವಿಗೆ ಕಾಳಿಪ್ರಸಾದಚಂದ್ರ ಎಂದೇ ನಾಮಕರಣವಾಯಿತು. ರಸಿಕಲಾಲಚಂದ್ರನು ಓರಿಯಂಟಲ್ ಸೆಮಿನರಿ ಎಂಬ ಪ್ರೌಢಶಾಲೆಯಲ್ಲಿ ಆಂಗ್ಲಭಾಷಾ ಶಿಕ್ಷಕನಾಗಿದ್ದನು. ಅಭೇದಾನಂದರು ತಮ್ಮ ೫ನೆಯ ವರ್ಷಕ್ಕೆ ಗೋವಿಂದಸೀಲ್ ನಡೆಸುತ್ತಿದ್ದ ನರ್ಸರಿಶಾಲೆಯಲ್ಲಿ ಎರಡು ವರ್ಷ ಕಲಿತರು. ತರುವಾಯ ಯದುಪಂಡಿತನ ವಂಗವಿದ್ಯಾಲಯದಲ್ಲಿ ಮೂರುವರ್ಷ ಓದಿದರು. ಅಲ್ಲಿಂದ ಮುಂದಕ್ಕೆ ತಮ್ಮ ತಂದೆ ಅಧ್ಯಾಪಕರಾಗಿದ್ದ ಓರಿಯಂಟಲ್ ಸೆಮಿನರಿಯನ್ನು ಸೇರಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಆಗಲೇ ವ್ಯಾಯಾಮಶಾಲೆಗೂ ಹೋಗುತ್ತ ತಮ್ಮ ದೇಹಾರೋಗ್ಯವನ್ನು ಬಲಪಡಿಸಿಕೊಂಡರು.

ಯುವಾವಸ್ಥೆಗೆ ಕಾಲಿಡುತ್ತಿದ್ದಂತೆ ಅಭೇದಾನಂದರು ತಮ್ಮ ಜ್ಞಾನದಾಹವನ್ನು ತಣಿಸಿಕೊಳ್ಳಲು ಅದಿದೆನ್ನದೆ ಕೊಲ್ಕೊತ್ತ ನಗರದಲ್ಲಿ ಏರ್ಪಡುತ್ತಿದ್ದ ಎಲ್ಲ ಬಗೆಯ ಉಪನ್ಯಾಸ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡು, ಎಲ್ಲವನ್ನೂ ಚಿತ್ತವಿಟ್ಟು ಆಲಿಸುತ್ತಿದ್ದರು. ಜಳ್ಳನ್ನು ತೂರಿ ಗಟ್ಟಿಕಾಳುಗಳನ್ನು ಉಳಿಸಿಕೊಳ್ಳುವ ವಿವೇಚನಾ ಸಾಮರ್ಥ್ಯವಿದ್ದುದರಿಂದ ಎಷ್ಟೆಷ್ಟೇ ಕೇಳಿದರೂ ಗೊಂದಲಕ್ಕೆ ಬೀಳುವ ಪರಿಸ್ಥಿತಿ ಅವರಿಗೊದಗುತ್ತಿರಲಿಲ್ಲ. ವೇದಾಂತವಾಗೀಶನೆಂಬ ವಿದ್ವಾಂಸನ ಬಳಿ ಪತಂಜಲಿಮುನಿಗಳ ಯೋಗಸೂತ್ರವನ್ನು ಅಧ್ಯಯನ ಮಾಡಿದ ಬಳಿಕ, ಯೋಗಮಾರ್ಗದಲ್ಲಿ ಸಿದ್ಧಿಗಳಿಸಬೇಕೆಂಬ ಮಹತ್ವಾಕಾಂಕ್ಷೆ ಅವರ ಮನಸ್ಸಿನಲ್ಲಿ ಮೊಳೆತು ಹೆಮ್ಮರವಾಗಿಬಿಟ್ಟಿತು. ಅದೇ ಕಾರಣವಾಗಿ ಅವರು ದಕ್ಷಿಣೇಶ್ವರದಲ್ಲಿದ್ದ ಪರಮಹಂಸರ ಸಂಪರ್ಕವನ್ನು ಸಾಧಿಸಿಕೊಂಡರು.

**ಸಮಾಧಿಯ ಗಳಿಕೆ :** ಅಭೇದಾನಂದರು ಒಂದು ಭಾನುವಾರದ ದಿನ ದಾರಿಕೇಳಿಕೊಂಡು, ಕಾಲುನಡಿಗೆಯಲ್ಲಿ, ಬರಿಗಾಲಲ್ಲಿ ಅದೂ ಬಿರುಬಿಸಿಲಿನಲ್ಲಿ ದಕ್ಷಿಣೇಶ್ವರವನ್ನು ಮುಟ್ಟಿದರು. ಆ ಹೊತ್ತಿನಲ್ಲಿ ಪರಮಹಂಸರು ಸತ್ಸಂಗಕ್ಕಾಗಿ ಭಕ್ತರ ಮನೆಗೆ ಹೋಗಿದ್ದರು. ಅಭೇದಾನಂದರು ಮೊದಲಿಗೆ ನಿರಾಶರಾದರೂ ಸಂಧ್ಯಾಕಾಲದವರೆಗೆ ಕಾದಿದ್ದು ಅವರ ದರ್ಶನ ಪಡೆದುಕೊಂಡರು. ಪ್ರೀತಿಪೂರ್ಣವಾದ ನೋಟದಿಂದ ಪರಮಹಂಸರು, "ಏನು ಬಂದೆ ಮಗೂ" ಎಂದು ಚಿರಪರಿಚಿತರನ್ನು ಮಾತನಾಡಿಸುವಂತೆ ಪ್ರಶ್ನಿಸಿದರು. ಡವಡವನೆ ಬಡಿದುಕೊಳ್ಳುತ್ತಿದ್ದ ಎದೆ ಶಾಂತವಾಗಿ, ಆ ಅಮೃತಮಯವಾದ ವಾಣಿಯಿಂದ ಉತ್ತೇಜಿತರಾಗಿ, "ನಾನು ಯೋಗವನ್ನು ಕಲಿಯಬೇಕೆಂಬ ಮಹದಾಸೆಯಿಂದ ಬಂದಿದ್ದೇನೆ, ತಾವು ಕಲಿಸಿಕೊಡುತ್ತೀರಾ ಮಹಾರಾಜ್" ಎಂದು ವಿನಯದಿಂದ ಕೇಳಿಕೊಂಡರು.

ಅಭೇದಾನಂದರ ಮುಖವನ್ನು ನೋಡುತ್ತಿದ್ದಂತೆಯೇ ಪರಮಹಂಸರಿಗೆ ಅವರ ಪೂರ್ವಾಪರಗಳೆಲ್ಲ ಕಣ್ಣಿಗೆ ಕಟ್ಟಿದಂತೆ ಮುಂದೆಬಂದು ನಿಂತುವು. “ನೀನು ಪೂರ್ವಜನ್ಮದಲ್ಲಿ ಯೋಗಿಪುರುಷನೇ ಆಗಿದ್ದೆಯಪ್ಪ, ದಡವನ್ನು ಸೇರಲು ಇನ್ನು ಸ್ವಲ್ಪವೇ ಸಾಧನೆ ಬಾಕಿಯುಳಿದಿತ್ತು, ಅದನ್ನೀಗ ಪೂರೈಸಿ ಪರಿಪೂರ್ಣನಾಗಿಬಿಡುತ್ತೀಯೆ, ಬಿಡು. ಇದೇ ನಿನಗೆ ಕೊನೆಯ ಜನ್ಮ, ನಾಳೆಯೇ ನಿನ್ನ ಇಚ್ಛೆ ನೆರವೇರುತ್ತದೆ” ಎಂದು ಆರ್ದ್ರ ಹೃದಯದಿಂದ ಹೇಳಿದರು. ಪರಮಹಂಸರ ಆ ಅಲೌಕಿಕ ದಿವ್ಯಪ್ರೇಮ ಮೊದಲನೋಟದಲ್ಲಿಯೇ ಅಭೇದಾನಂದರ ಹೃದಯವನ್ನು ಸೂರೆಗೊಂಡಿತು. ಆ ರಾತ್ರಿ ಅವರು ಅಲ್ಲಿಯೇ ಉಳಿದುಕೊಂಡರು.

ಮರುದಿನ ಪರಮಹಂಸರು ಅಭೇದಾನಂದರನ್ನು ಒಂದು ಮಂಚದ ಮೇಲೆ ಕೂರಿಸಿ, ಅವರ ನಾಲಗೆಯ ಮೇಲೆ ತಮ್ಮ ಬಲಗೈ ನಡುಬೆರಳಿನಿಂದ ಯಾವುದೋ ಪವಿತ್ರಮಂತ್ರವನ್ನು ಬರೆಯುತ್ತ, “ಜಗನ್ಮಾತೆಯಾದ ಕಾಳಿಯನ್ನು ಸ್ಮರಣೆ ಮಾಡಪ್ಪ” ಎಂದರು. ಅಷ್ಟು ಆದುದೇ ತಡ, ಅಭೇದಾನಂದರು ತಮ್ಮ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡು ಸಮಾಧಿಸ್ಥಿತಿಯನ್ನು ಸೇರಿಬಿಟ್ಟರು; ಒಳಗೊಳಗೇ ಲೋಕೋತ್ತರವಾದ ಆನಂದವನ್ನು ಆಸ್ವಾದಿಸಿದರು. ಸ್ವಲ್ಪ ಹೊತ್ತಾದ ಬಳಿಕ ಪರಮಹಂಸರೇ ಅವರನ್ನು ಬಾಹ್ಯಪ್ರಜ್ಞೆಗೆ ಮರಳುವಂತೆ ಮಾಡಿ, ಅವರಿಗಾದ ಅಪೂರ್ವ ಅನುಭವಗಳನ್ನೆಲ್ಲ ಕೇಳಿ ತಿಳಿದುಕೊಂಡು ಸಂತೋಷಪಟ್ಟರು. “ಇನ್ನೊಮ್ಮೆ ಇಲ್ಲಿಗೆ ಬಾಪ್ಪ” ಎಂದು ಕಳಕಳಿಯಿಂದ ಹೇಳಿದರು. ಪರಮಹಂಸರಾದರೋ ಇಂತಹ ಭವ್ಯಜೀವಿಗಳ ಬರವನ್ನೇ ಸದಾಕಾಲ ಹಾರೈಸುತ್ತಿದ್ದರು.

**ಗೃಹಸ್ಥಾಶ್ರಮಕ್ಕೆ ಸೆಳೆಯುವ ಆಸೆ :** ತಮ್ಮ ಮಗನು ಪರಮಹಂಸರ ‘ಬಲೆಗೆ ಬಿದ್ದಿದ್ದಾನೆ’ ಎಂಬುದು ತಿಳಿದಾಗ ರಸಿಕಲಾಲನಿಗೆ ಸಮಾಧಾನವಾಗಲಿಲ್ಲ. ಪರಮಹಂಸರನ್ನು ಕಂಡು “ನನ್ನ ಮಗ ಮದುವೆಯಾಗಿ ಗೃಹಸ್ಥನಾಗಬೇಕೆಂಬ ಆಕಾಂಕ್ಷೆ ನನಗಿದೆ ಮಹಾರಾಜ್, ನೀವು ಹಾಗೆ ಅವನಿಗೆ ಸ್ವಲ್ಪ ಬುದ್ಧಿವಾದ ಹೇಳಬೇಕು” ಎಂದು ಕೇಳಿಕೊಂಡನು. ಅದಕ್ಕೆ ಪರಮಹಂಸರು ಶಾಂತಮನಸ್ಕರಾಗಿಯೇ, “ನಿನ್ನ ಮಗ ಸಾಮಾನ್ಯನಲ್ಲವಯ್ಯ, ಅವನು ಮಹಾಯೋಗಿ, ಅವನಿಗೆ ಮದುವೆಯಾಗುವ ಇಷ್ಟವಿಲ್ಲದಿದ್ದರೆ ಬಲವಂತ ಮಾಡಬೇಡಿ” ಎಂದುಬಿಟ್ಟರು. ಪರಮಹಂಸರೇ ನನ್ನ ಪಾಲಿನ ಸದ್ಗುರು ಎಂದು ನಿಶ್ಚಯಿಸಿಕೊಂಡಬಳಿಕ ಅಭೇದಾನಂದರು ಆಗಾಗ ಮನೆಯನ್ನು ತೊರೆದು, ದಕ್ಷಿಣೇಶ್ವರಕ್ಕೆ ಓಡಿಹೋಗಿ, ಅವರ ಸನ್ನಿಧಿಯಲ್ಲಿಯೇ ಇದ್ದುಬಿಡುತ್ತಿದ್ದರು. ರಸಿಕಲಾಲನಿಗೆ ಅದು ಇಷ್ಟವಾಗದೆ ಮನೆಯ ಮುಖ್ಯದ್ವಾರಕ್ಕೆ ಬೀಗಜಡಿದು, ಮಗನನ್ನು ತಡೆಯುವ ಯತ್ನಮಾಡಿದನು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಪರಮಹಂಸರು ಹೇಳಿದಂತೆ ಮನೆಯಲ್ಲಿಯೇ ಧ್ಯಾನಪರವಶರಾಗಿ ದಿವ್ಯದರ್ಶನಗಳನ್ನು ಪಡೆದುಕೊಳ್ಳುತ್ತಿದ್ದರು. ಒಂದು ದಿನ ಅವರು ಧ್ಯಾನಮಗ್ನರಾಗಿದ್ದಾಗ ಶ್ರೀಕೃಷ್ಣಪರಮಾತ್ಮ, ಏಸುಕ್ರಿಸ್ತ, ಚೈತನ್ಯ ಮಹಾಪ್ರಭು ಮೊದಲಾದ ಪುಣ್ಯಮೂರ್ತಿಗಳು ಪರಮಹಂಸರ ತೇಜೋಮಂಡಲದಲ್ಲಿ ಐಕ್ಯವಾಗುತ್ತಿರುವುದನ್ನು ಕಂಡು ಸಂಭ್ರಮಿತರಾದರು. ತನ್ಮೂಲಕ ಪರಮಹಂಸರು ಅವತಾರಪುರುಷರೆಂಬುದನ್ನು ಅಭೇದಾನಂದರು ಮನದಟ್ಟು ಮಾಡಿಕೊಂಡರು.

ಪರಮಹಂಸರು ತಮ್ಮ ಶಿಷ್ಯರಿಗೆ ಅವರವರ ವ್ಯಕ್ತಿತ್ವವನ್ನೂ ಮನೋಧರ್ಮವನ್ನೂ ಅರಿತು ಒಬ್ಬೊಬ್ಬರಿಗೂ ಪ್ರತ್ಯೇಕವಾಗಿಯೇ ತರಬೇತಿ ನೀಡುತ್ತಿದ್ದರು. ಅಭೇದಾನಂದರಿಗಾದರೋ ಬೆಳಗ್ಗೆ ಮತ್ತು ಸಂಜೆ ನಿಯಮಿತವಾಗಿ ಧ್ಯಾನ ಮಾಡುವುದನ್ನು ಹೇಳಿಕೊಟ್ಟರಲ್ಲದೆ, ಗಟ್ಟಿಯಾಗಿ ಚಪ್ಪಾಳೆ ತಟ್ಟುತ್ತ, ‘ಹರಿಬೋಲ್ ಹರಿಬೋಲ್’ ಎಂದು ನಾಮಸಂಕೀರ್ತನೆ ಮಾಡುವುದನ್ನೂ ಕಲಿಸಿಕೊಟ್ಟರು. ದಕ್ಷಿಣೇಶ್ವರಕ್ಕೆ ಹೋದಾಗಲೆಲ್ಲ ಅಭೇದಾನಂದರು ಪರಮಹಂಸರ ಸೇವೆಯಲ್ಲಿ ತೊಡಗಿಕೊಳ್ಳುವುದರಲ್ಲಿಯೂ ಆಸಕ್ತಿ ತೋರಿಸುತ್ತಿದ್ದರು. ಗಂಟಲುಬೇನೆಗೆ ಆ ಸದ್ಗುರುವು ತುತ್ತಾದಮೇಲಂತೂ ಅವರ ಸೇವೆಶುಶ್ರೂಷೆಗಳಿಗೇ ತಮ್ಮನ್ನು ಒಪ್ಪಿಸಿಕೊಂಡುಬಿಟ್ಟರು. ಸಂನ್ಯಾಸಿಗಳಿಗೆ ವಿತರಿಸಲೆಂದು ಗೋಪಾಲದಾದಾ ತಂದಿದ್ದ ಕಾವಿವಸ್ತ್ರ – ಜಪಮಾಲೆಗಳ ರಾಶಿಯಿಂದ ಪರಮಹಂಸರ ಅಮೃತಹಸ್ತದಿಂದಲೇ ಒಂದೊಂದು ಜೊತೆ ಅಭೇದಾನಂದರಿಗೂ ದಕ್ಕಿತು.

**ದೇಶಾಟನೆ ಮತ್ತು ವಿದೇಶಯಾತ್ರೆ:** ೧೮೮೬ರಲ್ಲಿ ಪರಮಹಂಸರು ಬ್ರಹ್ಮೀಭೂತರಾದ ಬಳಿಕ, ಅವರ ಶಿಷ್ಯರೆಲ್ಲರೂ ತಮ್ಮ ಸಾಧನೆಯನ್ನು ಮುಂದುವರಿಸುವ ಉದ್ದೇಶದಿಂದ ವರಾಹನಗರವೆಂಬಲ್ಲಿ ಮಠವೊಂದನ್ನು ಹುಟ್ಟುಹಾಕಿ, ಪರಮಹಂಸರ ಚಿತಾಭಸ್ಮವನ್ನು ಅಲ್ಲಿ ಸ್ಥಾಪಿಸಿ ಪೂಜಿಸತೊಡಗಿದರು. ಅಭೇದಾನಂದರಾದರೋ ೧೮೮೭ರಲ್ಲಿ ವಿವೇಕಾನಂದರ ಪೌರೋಹಿತ್ಯದಲ್ಲಿ ವಿಧಿವತ್ತಾಗಿ ಸಂನ್ಯಾಸವನ್ನು ಸ್ವೀಕರಿಸಿ, ಅವರಿಂದಲೇ ಸಂನ್ಯಾಸಾಶ್ರಮನಾಮವನ್ನೂ ಪಡೆದು ಧನ್ಯರಾದರು.

ಸಂನ್ಯಾಸಿಯಾದ ಬಳಿಕ ಅಭೇದಾನಂದರು ವ್ಯಾಪಕವಾದ ದೇಶಾಟನೆಯನ್ನು ಕೈಗೊಂಡು ಅಪಾರವಾದ ಲೋಕಾನುಭವವನ್ನು ಸಂಪಾದಿಸಿಕೊಂಡರು. ಬರಿಗಾಲಿನಲ್ಲಿ ನಡೆಯಬೇಕು, ಕೈಲಿ ಕಾಸಿಟ್ಟುಕೊಳ್ಳಬಾರದು, ರಾತ್ರಿಯಲ್ಲಿ ಯಾರ ಮನೆಯಲ್ಲಿಯೂ ತಂಗಬಾರದು, ದಿನಕ್ಕೊಮ್ಮೆ ಮಾತ್ರ ಭಿಕ್ಷೆ ಬೇಡಿ ಉದರಪೋಷಣೆ ಮಾಡಿಕೊಳ್ಳಬೇಕು ಎಂದು ತಮಗೆ ತಾವೇ ನಿರ್ಬಂಧಗಳನ್ನು ಹೇರಿಕೊಂಡು ಪರಿವ್ರಾಜಕರಾಗಿ ಹೊರಟುಬಿಟ್ಟರು. ಗಾಜೀಪುರ, ವಾರಾಣಸಿ, ಅಯೋಧ್ಯಾ, ಹರಿದ್ವಾರ, ಹೃಷೀಕೇಶ, ದೇವಪ್ರಯಾಗ, ಜೋಷಿಮಠ, ಬದರೀನಾಥ, ಕೇದಾರನಾಥ, ಉತ್ತರಕಾಶಿ, ಗಂಗೋತ್ರಿ, ಯಮುನೋತ್ರಿಗಳಲ್ಲಿ ಸಂಚಾರಮಾಡಿದರು. ಹಿಮಾಲಯದ ಆ ದಿವ್ಯಧಾಮಗಳ ಯಾತ್ರಾನುಭವಗಳನ್ನೆಲ್ಲ ಅಭೇದಾನಂದರು ತಮ್ಮ ಆತ್ಮಕಥೆಯಲ್ಲಿ ಸೊಗಸಾಗಿ ಬಣ್ಣಿಸಿದ್ದಾರೆ.

ಕಠಿಣವಾದ ದೇಶಾಟನೆಯಿಂದಾಗಿ ಅಭೇದಾನಂದರ ದೇಹಸ್ಥಿತಿಯಲ್ಲಿ ಏರುಪೇರಾಯಿತು. ಅದರಿಂದಾಗಿ ವರಾಹ ನಗರದ ಮಠಕ್ಕೆ ಮರಳಿಬಂದು, ಸ್ವಲ್ಪ ವಿಶ್ರಾಂತಿ ಪಡೆದುಕೊಂಡು ಮೇಲೆದ್ದರು. ಹಾಗೆ ಮೇಲೆದ್ದುದೇ ತಡ, ಅವರು ಮರಳಿ ತಮ್ಮನ್ನು ತೀರ್ಥಾಟನೆಗೆ ಸಮರ್ಪಿಸಿಕೊಂಡುಬಿಟ್ಟರು. ಬುದ್ಧಗಯಾ, ಪ್ರಯಾಗ, ಆಗ್ರ, ದೆಹಲಿ, ಜಯಪುರ, ಉದಯಪುರ, ಖೇತ್ರಿ, ಮೌಂಟ್‌ಅಬು, ಗಿರ್‌ನಾರ್, ಪೋರಬಂದರ್, ಜುನಾಗಢ, ದ್ವಾರಕಾ, ಮುಂಬೈ, ಮಹಾಬಲೇಶ್ವರ, ಪೂನಾ, ಬರೋಡಾ, ನಾಸಿಕ, ದಂಡಕಾರಣ್ಯಗಳನ್ನು ಕಣ್ಣಿಗೆ ತುಂಬಿಕೊಂಡರು. ಆಮೇಲೆ ದಕ್ಷಿಣಭಾರತದತ್ತ ಹೊರಳಿಕೊಂಡು, ರಾಮೇಶ್ವರ, ಮಧುರೆ, ತಿರುಚನಾಪಳ್ಳಿ, ತಂಜಾವೂರು, ಕುಂಭಕೋಣಂ, ಕಂಚಿ, ಪಕ್ಷಿತೀರ್ಥ, ಚೆನ್ನೈ ಮುಂತಾದೆಡೆಗಳಲ್ಲಿ ನಡೆದಾಡಿದರು. ಹತ್ತು ವರ್ಷಗಳ ದೀರ್ಘಪರ್ಯಟನೆ ಅವರ ಪಾಲಿಗಾಯಿತು.

ವಿವೇಕಾನಂದರು ವಿದೇಶಗಳಲ್ಲಿ ಪರಮಹಂಸರ ವಿಚಾರ ಧಾರೆಯನ್ನು ಮೆರೆಸುವ ವ್ಯಾಪಕ ಯೋಜನೆಗಳನ್ನು ರೂಪಿಸಿ, ಅದರ ಅಂಗವಾಗಿ ಅಭೇದಾನಂದರನ್ನು ೧೮೯೬ರಲ್ಲಿ ಇಂಗ್ಲೆಂಡಿಗೆ ಬರಮಾಡಿಕೊಂಡರು. ಅಭೇದಾನಂದರು ಒಂದು ವರ್ಷ ಪೂರ್ತಿ ಲಂಡನ್ ಮಹಾನಗರದಲ್ಲಿದ್ದು ವೇದಾಂತ ಪ್ರಚಾರ ಮಾಡಿದರು. ಆಮೇಲೆ ಅಮೇರಿಕಾದ ನ್ಯೂಯಾರ್ಕ್‌ನಗರವನ್ನು ಹೊಕ್ಕು, ಈ ಮೊದಲೇ ವಿವೇಕಾನಂದರು ಅಲ್ಲಿ ಸ್ಥಾಪಿಸಿದ್ದ, 'ವೇದಾಂತ ಸೊಸೈಟಿ' ಯನ್ನು ಅಭೂತಪೂರ್ವವಾಗಿ ಮುನ್ನಡೆಸಿದರು. ಬೇಕಾದಷ್ಟು ವೇದಾಂತೋಪನ್ಯಾಸಗಳನ್ನು ನಡೆಸಿಕೊಡುವುದರ ಜೊತೆಗೆ ಗ್ರಂಥಗಳನ್ನೂ ಬರೆದು ಪ್ರಕಟಿಸಿದರು. ಬರ್ಕ್‌ಷೈರ್ ಬೆಟ್ಟಗಳ ತಪ್ಪಲಿನಲ್ಲಿ ೩೭೦ ಎಕರೆಯಷ್ಟು ದೇಶೋವಿಶಾಲವಾದ ಜಾಗದಲ್ಲಿ ಕಿನ್ನರಲೋಕವೆಂಬಂತಹ ಆಶ್ರಮವೊಂದನ್ನು ಎಬ್ಬಿಸಿ ೧೯೦೭ರಲ್ಲಿ ಲೋಕಾರ್ಪಣಗೊಳಿಸಿದರು. ೨೫ ವರ್ಷಗಳಷ್ಟು ಸುದೀರ್ಘಕಾಲ ಅಮೇರಿಕದಲ್ಲಿ ಸದ್ಗುರುವಿನ ಸಂದೇಶಗಳನ್ನು ಸಾರಿ, ವಿಜಯಪತಾಕೆಯನ್ನು ಹಾರಿಸಿದರು.

**ಅಧ್ಯಯನ ಮತ್ತು ಸಂಶೋಧನೆ:** ಅಮೇರಿಕಾದ ಯಾತ್ರೆ ಸಾಕೆನಿಸಿದಾಗ ೧೯೨೧ರಲ್ಲಿ ಅಭೇದಾನಂದರು ಭಾರತಕ್ಕೆ ಮರಳಿಬಂದರು. ಹಾಗೆ ಬಂದಮೇಲೂ ಸುಮ್ಮನೆ ಕೂರಲಿಲ್ಲ. ಹಿಮಾಲಯವನ್ನು ದಾಟಿ ಟಿಬೆಟ್ ಯಾತ್ರೆಯನ್ನು ಕೈಗೊಂಡರು. ಹೆಮಿಸ್ ಬೌದ್ಧಮಠದಲ್ಲಿ ಸ್ವಲ್ಪಕಾಲ ನೆಲೆಸಿ ಬೌದ್ಧತತ್ತ್ವಶಾಸ್ತ್ರವನ್ನು ಕುರಿತು ಸಂಶೋಧನೆ ನಡೆಸಿದರು. ಆ ವಿವರಗಳನ್ನೆಲ್ಲ ಅಭೇದಾನಂದರು 'ಕಾಶ್ಮೀರ ಟಿಬೆಟ್‌ಗಳಿಗೆ ಪಯಣ' ಎಂಬ ತಮ್ಮ ಗ್ರಂಥವೊಂದರಲ್ಲಿ ವಿವರಿಸಿದ್ದಾರೆ.

ಅಭೇದಾನಂದರು ಅಮೇರಿಕದಿಂದ ಬರುವಾಗ ರಾಶಿರಾಶಿ ಪುಸ್ತಕಗಳನ್ನೂ ಹಸ್ತಪ್ರತಿಗಳನ್ನೂ ಪೀಠೋಪಕರಣಗಳನ್ನೂ ತಂದಿದ್ದರು. ಬೇಲೂರುಮಠದಲ್ಲಿ ಅದನ್ನೆಲ್ಲ ವ್ಯವಸ್ಥಿತವಾಗಿ ಜೋಡಿಸಿಟ್ಟುಕೊಂಡು ಅಧ್ಯಯನ ಮಾಡಲು ಜಾಗಸಾಲದೆ, ಮಠದಿಂದ ಪ್ರತ್ಯೇಕವಾಗಿ 'ರಾಮಕೃಷ್ಣ ವೇದಾಂತ ಸೊಸೈಟಿ' ಎಂಬ ಸಂಸ್ಥೆಯೊಂದನ್ನು ಸ್ವತಂತ್ರವಾಗಿ ಕಟ್ಟಿ ಬೆಳೆಸಿದರು. ಡಾರ್ಜಿಲಿಂಗ್‌ನಲ್ಲೊಂದು ಆಶ್ರಮವನ್ನು ಸ್ಥಾಪಿಸಿದರು. 'ವಿಶ್ವವಾಣಿ' ಎಂಬ ಬಂಗಾಳಿ ಆಧ್ಯಾತ್ಮಿಕ ಮಾಸಪತ್ರಿಕೆಯೊಂದನ್ನು ಪ್ರಾರಂಭಿಸಿದರು. ಹಲವು ಯುವಕರನ್ನು ತ್ಯಾಗಜೀವನಕ್ಕೆ ಹುರಿದುಂಬಿಸಿದರು. ಹಲವುಹತ್ತು ಕಡೆಗಳಲ್ಲಿ ಉಪನ್ಯಾಸಗಳನ್ನು ನಡೆಸಿಕೊಟ್ಟು ವೇದಾಂತದ ಜಾಗೃತಿಯನ್ನುಂಟುಮಾಡಿದರು.

**ವ್ಯಕ್ತಿತ್ವದ ವರ್ಣಮಯತೆ :** ಅಭೇದಾನಂದರು ಬಾಲ್ಯದಿಂದಲೂ ಅಧ್ಯಯನಶೀಲರಾಗಿದ್ದುದರಿಂದ ಮುಂದಕ್ಕೆ ಗಣ್ಯ ವಿದ್ವಾಂಸರಾಗಿ ಪ್ರಕಾಶಕ್ಕೆ ಬಂದರು. ತಮ್ಮ ಅಸ್ಖಲಿತ ಆಂಗ್ಲವಾಣಿಯಿಂದ ಇಂಗ್ಲೆಂಡ್, ಅಮೇರಿಕಗಳ ಜಿಜ್ಞಾಸುಗಳನ್ನು ಬೆರಗುಗೊಳಿಸಿದರು. ಭಾರತೀಯ ತತ್ತ್ವಜ್ಞಾನವನ್ನು ಮಾತ್ರವಲ್ಲದೆ, ಪಾಶ್ಚಾತ್ಯ ತತ್ತ್ವಜ್ಞಾನವನ್ನೂ ಅವರು ಅರೆದು ಕುಡಿದಿದ್ದರು. ಪರಮಹಂಸರ ನೇರಶಿಷ್ಯರಲ್ಲಿ ವಿವೇಕಾನಂದರನ್ನು ಹೊರತುಪಡಿಸಿದರೆ ಅಭೇದಾನಂದರೇ ಶ್ರೇಷ್ಠ ವಿದ್ವನ್ಮಣಿಗಳೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು ರಚಿಸಿರುವ ಕೃತಿಶ್ರೇಣಿ ಹಲವು ಸಂಪುಟಗಳಲ್ಲಿ ಪ್ರಕಟವಾಗಿದೆ.

ತಮ್ಮ ಬದುಕಿಗೆ ಬೇಕಾದುದೇನು ಎಂಬುದನ್ನು ಅಭೇದಾನಂದರು ನಿಚ್ಚಳವಾಗಿ ಕಂಡುಕೊಂಡಿದ್ದರು. ಶಾಲೆಯ ದಿನಗಳಲ್ಲೇ ಅವರೊಬ್ಬ ಉತ್ತಮ ಚಿತ್ರಕಲಾಕೋವಿದರಾಗಿದ್ದರು. ಶಾಲೆಯ ಚಿತ್ರಕಲಾಧ್ಯಾಪಕರು ಒಮ್ಮೆ "ತತ್ತ್ವಜ್ಞಾನಿಯಾಗುವುದಕ್ಕಿಂತ ಕಲೋಪಾಸಕನಾಗುವುದೇ ಮೇಲು" ಎಂದು ಹೇಳಿದಾಗ ಅಭೇದಾನಂದರು "ಇಲ್ಲ ಮಹಾಶಯರೆ, ಕಲೋಪಾಸಕನು ಮೇಲುಮೇಲಿನದನ್ನು ಮಾತ್ರವೇ ಅಭ್ಯಾಸಮಾಡುತ್ತಾನೆ. ಆದರೆ ತತ್ತ್ವಜ್ಞಾನಿಯು ಸೃಷ್ಟಿಯ ಆಳದಲ್ಲೇನಿದೆ ಎಂದು ಒಳಕ್ಕೊಳಕ್ಕೆ ಮುಳುಗುತ್ತಾನೆ" ಎಂದು ತಮ್ಮ ನಿಲುವನ್ನು ಸಾಧಿಸಿಕೊಂಡರು.

ಅಭೇದಾನಂದರು ತಮ್ಮಿಂದಾದ ತಪ್ಪುಗಳನ್ನು ನಿಸ್ಸಂಕೋಚವಾಗಿ ತಿದ್ದಿಕೊಳ್ಳುತ್ತಿದ್ದರು. ಕಾಶೀಪುರತೋಟದ ಮನೆಯಲ್ಲಿ ಮೀನುಗಳಿದ್ದ ಎರಡು ಕೊಳಗಳಿದ್ದವು. ಗಾಳಹಾಕಿ ಮೀನು ಹಿಡಿಯುವ ಹವ್ಯಾಸವಿದ್ದ ಅಭೇದಾನಂದರು ಅಲ್ಲಿ ತಮ್ಮ ಗಾಳಬೀಸುತ್ತಿದ್ದರು. ಅದನ್ನರಿತ ಪರಮಹಂಸರೊಮ್ಮೆ, "ಏನಪ್ಪಾ, ನೀನು ಗಾಳಹಾಕಿ ಮೀನು ಹಿಡಿಯುತ್ತೀಯಂತೆ ನಿಜವೆ" ಎಂದು ಕೇಳಿದರು. ಅಭೇದಾನಂದರು ಹೌದೆಂದು ಒಪ್ಪಿಕೊಂಡಾಗ ಪರಮಹಂಸರು, "ಅದು ಪಾಪಕಾರ್ಯವಪ್ಪಾ, ಜೀವರಾಶಿಗಳನ್ನು ಕೊಂದಂತೆ ಆಗುತ್ತದೆ" ಎಂದರು. ಅದಕ್ಕೆ ಅಭೇದಾನಂದರು, "ಈ ಆತ್ಮನು ಯಾರನ್ನೂ ಕೊಲ್ಲುವುದೂ ಇಲ್ಲ, ಯಾರಿಂದಲೂ ಕೊಲ್ಲಲ್ಪಡುವುದೂ ಇಲ್ಲ" ಎಂದು ಭಗವದ್ಗೀತೆಯ ಶ್ಲೋಕವನ್ನು ಎತ್ತಿಹೇಳಿ, ಪರಮಹಂಸರೊಡನೆ ವಾದಕ್ಕಿಳಿದರು. ಆತ್ಮಸಾಕ್ಷಾತ್ಕಾರದ ನೆಲೆಯಲ್ಲಿ ಹೇಳಿದ್ದ ಮಾತನ್ನು ಅಭೇದಾನಂದರು ವ್ಯಾವಹಾರಿಕ ನೆಲೆಗೆ ಎಳೆದುತಂದಿದ್ದರು. ಆಗ ಪರಮಹಂಸರು, "ನಿಜವಾದ

ಜ್ಞಾನವನ್ನು ಪಡೆದವನು ಎಂದಿಗೂ ತಪ್ಪುಹೆಜ್ಜೆ ಇಡುವುದಿಲ್ಲ. ನಿನ್ನನ್ನು ತುಂಬಾ ಬುದ್ಧಿವಂತ ಹುಡುಗ ಎಂದುಕೊಂಡಿದ್ದೇನೆ. ನಾನು ಹೇಳಿದ್ದನ್ನೇ ಅನುಸಂಧಾನ ಮಾಡಿದರೆ ನಿನಗೆ ಅರ್ಥ ವಾಗುತ್ತದೆ" ಎಂದು ತಿಳಿಯಹೇಳಿದರು. ಅದರಂತೆಯೇ ಅಭೇದಾನಂದರು ಮೂರು ದಿನಗಳ ಕಾಲ ಚಿಂತನೆ ನಡೆಸಿ, ಅದರ ಅಂತರಾರ್ಥವನ್ನು ಅರಿತುಕೊಂಡರು. ಪರಮಹಂಸರ ಎದುರಿನಲ್ಲಿ ನಿಂತು, "ಮಹಾರಾಜ್, ನಾನೀಗ ಮೀನು ಹಿಡಿಯುವುದು ಏಕೆ ಕೆಟ್ಟದ್ದು ಎಂಬುದನ್ನು ಮನಗಂಡಿದ್ದೇನೆ. ಇನ್ನುಮುಂದೆ ಹಾಗೆ ಮಾಡುವುದಿಲ್ಲ, ದಯವಿಟ್ಟು ನನ್ನನ್ನು ಕ್ಷಮಿಸಿ" ಎಂದು ಕೇಳಿಕೊಂಡರು.

**ಬೆಟ್ಟದ ಗವಿಯಲ್ಲಿ ಯೋಗರಹಸ್ಯ :** ವಿಜಯಕೃಷ್ಣಗೋಸ್ವಾಮಿ ಎಂಬ ಭಕ್ತನೊಬ್ಬನು ಒಂದು ದಿನ ಪರಮಹಂಸರೊಡನೆ ಮಾತ ನಾಡುತ್ತಿರುವಾಗ ನಡುವೆ, "ಮಹಾರಾಜ್, ನಾನು ಗಯಾಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿನ ಬಾರಾಬರ್‌ಬೆಟ್ಟದ ಗವಿಯಲ್ಲಿ ಒಬ್ಬ ಹಠಯೋಗಿಯನ್ನು ಕಂಡು ಮಾತನಾಡಿಸಿಕೊಂಡು ಬಂದೆ, ಅವನೊಬ್ಬ ಅದ್ಭುತವ್ಯಕ್ತಿ" ಎಂದು ಹೇಳಿದನು. ಆ ಮಾತು ಕಿವಿಗೆ ಬೀಳುತ್ತಿದ್ದಂತೆಯೇ ಅಭೇದಾನಂದರು ಹೇಳಕೇಳದೆ ಹೊರಟೇಬಿಟ್ಟರು. ಕಷ್ಟಬಿದ್ದು ಆ ತಾಣವನ್ನು ತಲುಪಿದಾಗ ಹಿರಿಯನಾಗರಿಕರು, "ಬೇಡಪ್ಪ ಅಲ್ಲಿಗೆ ಹೋಗಬೇಡ, ಬೆಟ್ಟ ಹತ್ತುವಾಗ ಆ ಜನರು ಕಲ್ಲುಬೀಸುತ್ತಾರೆ, ಪ್ರಾಣಾಪಾಯವೂ ಇದೆ" ಎಂದು ಎಚ್ಚರಿಸಿದರು. ಅಭೇದಾನಂದರು ಅದೊಂದನ್ನೂ ಕಿವಿಗೆ ಹಾಕಿಕೊಳ್ಳದೆ ಬೆಟ್ಟದ ಹಿಂಭಾಗದಿಂದ ಮೇಲೇರಿ ಬಳಿಕ ಅರಣ್ಯವನ್ನು ದಾಟುತ್ತಿದ್ದಂತೆ ಆ ಗವಿಯ ಬಾಗಿಲು ಸಿಕ್ಕಿಯೇ ಬಿಟ್ಟಿತು. ಆ ಯೋಗಿಗಳೆಲ್ಲ ಧುನಿ ಹತ್ತಿಸಿಕೊಂಡು, ಅದರ ಸುತ್ತ ಕುಳಿತು ಕಾಯಿಸಿಕೊಳ್ಳುತ್ತಿದ್ದರು. ಅವರೆಲ್ಲ ಅಭೇದಾನಂದರ ಮೇಲೆ ಎರಗಬೇಕೆನ್ನುವಷ್ಟರಲ್ಲಿ, "ಓಂ ನಮೋ ನಾರಾಯಣಾಯ" ಎಂದು ಹೇಳುತ್ತ ಅಡ್ಡಬಿದ್ದು ಅಪಾಯದಿಂದ ಪಾರಾದರು. ಕೆಲವೇ ದಿನಗಳಲ್ಲಿ ಆ ಯೋಗಿಗಳ ಬಳಿ ಯಾವ ಯೋಗರಹಸ್ಯವೂ ಇಲ್ಲ, ಅವರೆಲ್ಲ ಕೇವಲ ಢೋಂಗಿಗಳು ಎಂದು ಗೊತ್ತಾಯಿತು. ಅಲ್ಲಿಂದ ತಪ್ಪಿಸಿಕೊಂಡು ಬರುವುದು ಅಷ್ಟು ಸುಲಭವಾಗಿರಲಿಲ್ಲ. ಇದ್ದಕ್ಕಿದಂತೆ ಒಂದು ದಿನ ಮಧ್ಯಾಹ್ನ "ನೀರು ತರುತ್ತೇನೆ" ಎಂದು ಗವಿಯಿಂದ ತಪ್ಪಿಸಿಕೊಂಡು ಬಂದು, ಕೊಡವನ್ನು ತೂರಿ ಎಸೆದು ಓಟಕಿತ್ತರು. ಆಗ ಆ ಢೋಂಗಿಗಳು ಅಭೇದಾನಂದರ ಮೇಲೆ ಕಲ್ಲುಗಳ ಮಳೆಯನ್ನೆಲ್ಲ ಸುರಿಸಿದರು. ಸದ್ಯ, ಗುರುಕೃಪೆ ಚೆನ್ನಾಗಿತ್ತು, ಅಭೇದಾನಂದರು ಗಾಸಿಗೊಳ್ಳದೆ ಹೇಗೋ ಪಾರಾಗಿ ಊರಿಗೆ ಬಂದರು. ಎಲ್ಲವನ್ನೂ ಪರಮಹಂಸರಲ್ಲಿ ಅರಿಕೆಮಾಡಿಕೊಂಡರು. ಆಗ ಪರಮಹಂಸರು "ನಾನಿಲ್ಲಿರುವಾಗ ನೀನು ಎಲ್ಲೆಲ್ಲಿಯೋ ಹೋಗಿ ಸಂಕಟಪಡುವುದೇಕಪ್ಪಾ" ಎಂದು ಸೂಚ್ಯವಾಗಿ ಹೇಳಿ ಸುಮ್ಮನಾದರು.

ಅಭೇದಾನಂದರು ಕವಿಹೃದಯಸಂಪನ್ನರಾಗಿದ್ದರು. ಪರಮಹಂಸರನ್ನೂ ಶ್ರೀಮಾತೆಯವರನ್ನೂ ಕುರಿತಂತೆ ಕೆಲವು ಸ್ತೋತ್ರಗಳನ್ನು ಸಂಸ್ಕೃತದಲ್ಲಿ ರಚಿಸಿದ್ದರು. ಅವುಗಳನ್ನು ಶ್ರೀಮಾತೆಯವರ ಸಮ್ಮುಖದಲ್ಲಿ ಸಮರ್ಪಿಸಿದಾಗ ಅವರು "ವಿದ್ಯಾಭಿಮಾನಿದೇವತೆಯಾದ ಸರಸ್ವತಿಯು ನಿನ್ನ ನಾಲಗೆಯ ಮೇಲೆ ನಲಿದಾಡುತ್ತಿರಲಿ" ಎಂದು ಹರಸಿದರು. ಶ್ರೀಮಾತೆ ಯವರೊಡನೆ ವೃಂದಾವನಯಾತ್ರೆಗೆ ಹೋಗಿದ್ದಾಗ ಆ ಕ್ಷೇತ್ರದ 'ಪರಿಕ್ರಮ' ಮಾಡುವುದು ವಿಷ್ಣುಭಕ್ತರಿಗೆ ಅತ್ಯಂತ ಪ್ರಿಯವಾದ ವಿಚಾರ ಎಂಬ ಸಂಗತಿ ಅಭೇದಾನಂದರಿಗೆ ತಿಳಿಯಿತು. ಹಾಗೆ ತಿಳಿದುದೇ ಸರಿ, ಇನ್ನೂರಕ್ಕೂ ಹೆಚ್ಚು ಕಿಲೋಮೀಟರಷ್ಟು ದೂರಪ್ರಮಾಣವನ್ನು ಅವರು ಇಪ್ಪತ್ತೊಂದು ದಿನಗಳ ಕಾಲ ಪಟ್ಟುಹಿಡಿದು ವಿಧಿವತ್ತಾಗಿ ಸುತ್ತು ಹಾಕಿ ಗೆದ್ದುಬಂದರು.

ಅಭೇದಾನಂದರೂ ವಿವೇಕಾನಂದರೂ ಒಬ್ಬರಿಗೊಬ್ಬರು ಪಂಚಪ್ರಾಣವಾಗಿದ್ದರು. ವರಾಹನಗರ ಮಠದಲ್ಲಿದ್ದ ಕಾಲದಲ್ಲಿ "ಕಾಳಿಯು ಯಾವ ಕೆಲಸವನ್ನೂ ಮಾಡುವುದೇ ಇಲ್ಲ, ಅವನಿಗೆ ಜವಾಬ್ದಾರಿಯೆಂಬುದೇ ಇಲ್ಲ" ಎಂದು ಯಾರೋ ಗುರು ಭಾಯಿಗಳು ದೂರಿದರು. ಆಗ ವಿವೇಕಾನಂದರು "ನಮ್ಮಲ್ಲಿ ಒಬ್ಬನಾದರೂ ವಿದ್ವಾಂಸನಾಗಿ ಬೆಳೆಯಲಿ ಬಿಡಿ. ಪಾತ್ರೆ ತೊಳೆಯುವ ಕೆಲಸ ತಾನೆ, ಅದನ್ನು ನಾನೇ ಮಾಡುತ್ತೇನೆ" ಎಂದು ಅಭೇದಾನಂದರ ಪರವಾಗಿಯೇ ಮಾತನಾಡಿದರು. ೧೮೮೭ರ ಒಂದು ಶಿವರಾತ್ರಿಯಂದು ವಿವೇಕಾನಂದರು ತಮ್ಮ ಆಧ್ಯಾತ್ಮಿಕಶಕ್ತಿಯನ್ನು ಅಭೇದಾನಂದರೊಳಕ್ಕೆ ಹರಿಯಿಸಿ ಬಿಟ್ಟರು. ಆಗ ಅಭೇದಾನಂದರಿಗೆ ಯಾವುದೋ ವಿದ್ಯುತ್ ಪ್ರವಾಹ ತಮ್ಮೊಳಗೆ ಹರಿದು ಬರುತ್ತಿರುವಂತೆ ಭಾಸವಾಗಿ ಅವರ ಕೈಯೊಂದು ಗಡಗಡನೆ ನಡುಗುತ್ತಿತ್ತು. "ಆಸೆಗಳು ನಮ್ಮನ್ನು ಸುಟ್ಟುಹಾಕುತ್ತವೆ. ಅದಕ್ಕೆ ಮುನ್ನ ನಾವೇ ಅವುಗಳನ್ನು ಸುಟ್ಟುಹಾಕಿಬಿಡೋಣ" ಎಂದು ವಿವೇಕಾನಂದರೊಮ್ಮೆ ಹೇಳಿ ದಾಗ ಅಭೇದಾನಂದರೇ ಮೊದಲಾದ ಗುರುಭಾಯಿಗಳು, ವಿವೇಕಾನಂದರ ನೇತೃತ್ವದಲ್ಲಿ ಒಂದು ಧುನಿಯ ಸುತ್ತ ಧ್ಯಾನಸ್ಥ ರಾಗಿ ಕುಳಿತು, ಅವನ್ನೆಲ್ಲ ಧುನಿಗೆ ಹಾಕಿ ಸುಟ್ಟುಹಾಕಿಬಿಟ್ಟರು. ಆ ಸಂಗತಿಯನ್ನು ಅಭೇದಾನಂದರು ಪರಮಹಂಸರ ಮುಂದೆ ಅರಿಕೆಮಾಡಿಕೊಂಡಾಗ, ಆ ಸದ್ಗುರುವು ಹೊಟ್ಟೆಹುಣ್ಣಾಗುವಂತೆ ನಕ್ಕುನಲಿದರು.

**ಮಂಗಳವಾರ ಮೂಡಿದವರು ಶುಕ್ರವಾರ ಮುಳುಗಿದರು:** ಅಭೇದಾನಂದರು ಒಮ್ಮೆ ಡಾರ್ಜಿಲಿಂಗ್‌ನಿಂದ ಕೊಲ್ಕೊತ್ತೆಗೆ ರೈಲಿನಲ್ಲಿ ಪ್ರಯಾಣಿಸುತ್ತ ಬರುವಾಗ, ರೈಲು ಹಳಿತಪ್ಪಿ ಉರುಳಿಕೊಂಡು ಸ್ವಾಮಿಗಳು ಆಘಾತಕ್ಕೆ ತುತ್ತಾದರು. ಅದೇ ನೆಪವಾಗಿ ಅವರ ದೇಹಸ್ಥಿತಿ ಕೆಟ್ಟುಹೋಯಿತು. ಮುಂದಕ್ಕೆ ಅವರು ಜಲೋದರವೆಂದು ಕರೆಯುವ, ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವ, ಕಠಿಣ ಕಾಯಿಲೆಗೆ ಗುರಿಯಾಗಿಬಿಟ್ಟರು. ಒಂದೂವರೆ ವರ್ಷ ಹಾಸುಗೆ ಹಿಡಿದು ಮಲಗಿಬಿಟ್ಟರು. ಆಗಲೂ ಶಿಷ್ಯರಿಗೆ ಮಾರ್ಗದರ್ಶನ ಮಾಡುವುದು, ತಮ್ಮ ಉಪನ್ಯಾಸಗಳನ್ನು ಶಿಷ್ಯರಿಂದ ಓದಿಸಿ ತಿದ್ದುವುದು – ಮುಂತಾದುವನ್ನು ಮಾಡುತ್ತಲೇ ಇದ್ದರು.